ಅದೇ ತೋಟಗಾರಿಕೆ ಇಲಾಖೆಯವರು ೧೯೭೪-೭೫ರಲ್ಲಿ ೬೬೫೫ ರೂಪಾಯಿಗಳನ್ನು ಖರ್ಚುಮಾಡಿದ್ದರೆ ಲಾಭ ೫೬೬೩-೪೧ ರೂಪಾಯಗಳು ಬಂದಿದೆ. ಇಲ್ಲಿ ಲಾಭದಲ್ಲಿ ಇಷ್ಟೊಂದು ವ್ಯತ್ಯಾಸವಿರಲು ಕಾರಣ ವೇನು ? ಕೆಲಸ ಮಾಡುವವರ ಅಶ್ರದ್ಧೆಯೇ ಅಥವಾ ಸರಿಯಾದ ಹತೋಟೆ ಇಲ್ಲದೆ ಈ ರೀತಿ ಆಗಿದೆಯೇ ಹೇಗೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ,—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳುವಂತಹ ಯಾವುದೂ ಇದಕ್ಕೆ ಕಾರಣವಲ್ಲ ; ಪ್ರತಿವರ್ಷವೂ ಅವರು ಪ್ಲಾನ್‌ಟೇಷನ್ ಜಾಸ್ತಿ ಮಾಡುತ್ತಿರುವುದರಿಂದ ವರ್ಷೇ ವರ್ಷೇ ಹಣ ಖರ್ಚಾಗುತ್ತಿದೆ. ಕೊಕೋ ಪ್ಲಾನ್‌ಟೇಷನ್‌ನಲ್ಲಿ ಆದಾಯ ಬರಬೇಕಾದರೆ ೧೨ ವರ್ಷ ಕಳೆಯಬೇಕಾಗುತ್ತದೆ ಕಾಸಗಿಯವರು ತಮ್ಮ ಒಡಿಕೆ ತೋಟಗಳಲ್ಲಿ ಇದನ್ನು ಬೆಳೆಯುವುದರಿಂದ ಮತ್ತು ನೀರು ಮತ್ತು ಗೊಬ್ಬರ ಹೆಚ್ಚಾಗಿ ಕೊಡುವುದರಿಂದ ಈಲ್ಡ್ ಜಾಸ್ತಿ ಬರುತ್ತಿದೆ. ಅದೇರೀತಿ ತೋಟ ಗಾರಿಕೆ ಇಲಾಖೆಯವರು ಸಹ ನೀರಿನ ವಸತಿ ಇರುವ ಕಡೆಗಳಲ್ಲಿ ಇದನ್ನು ಬೆಳೆಯುವುದರಿಂದ ಈಲ್ಡ್ ಚೆನ್ನಾಗಿ ಬರುತ್ತಿದೆ. ಆದರೆ ಅರಣ್ಯ ಇಲಾಖೆಯವರು ಬೆಳೆಯುತ್ತಿರುವ ಕಡೆ ನೀರಿನ ಸೌಲಭ್ಯಕಡಿಮೆ ಇರುವುದರಿಂದ ಈಲ್ಡ್ ಕಡಿಮೆಯಾಗಿದೆ. ಇತ್ತೀಚೆಗೆ ಗೊಬ್ಬರ ಮತ್ತು ನೀರಿನ ಅನುಕೂಲಗಳನ್ನು ಇವರೂ ಸಹ ಹೆಚ್ಚಿಗೆ ಕೊಡುತ್ತಿರುವುದರಿಂದ ಈಲ್ಡ್ ಜಾಸ್ತಿ ಬರುತ್ತಿದೆ.

ಶ್ರೀ ಜಿ. ಪುಟ್ಟಸ್ವಾಮಿ.— ಈಗ ಈ ಇಲಾಖೆಗೆ ಯುವಕರಾದಂಥ ಮಂತ್ರಿಗಳು ಬಂದಿದ್ದಾರೆ. ಇವರು ಇದರ ಬಗ್ಗೆ ಹೆಚ್ಚಿನ ನಿಗಾ ತೆಗೆದುಕೊಂಡು ಅರಣ್ಯಸಂಪತ್ತನ್ನು ಜಾಸ್ತಿಮಾಡಿ ಸರ್ಕಾರಕ್ಕೆ ಆದಾಯ ಜಾಸ್ತಿ ಬರುವಂತೆ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇನ್ನು ಮುಂದೆ ಈ ರೀತಿ ನಷ್ಟವಾಗದಂತೆ ನೋಡಿಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಈಗಾಗಲೇ ಈ ಕೆಲಸವನ್ನು ಪ್ಲಾನ್‌ಟೇಷನ್ ಕಾರ್ಪೊರೇಷನ್‌ಗೆ ವಹಿಸಿದ್ದೇವೆ. ಅವರು ನಿಗಾ ವಹಿಸಿ ಕೆಲಸ ಮಾಡುತ್ತಿದ್ದಾರೆ-

ಶ್ರೀ ಎಸ್. ಎಂ ಕೃಷ್ಣ — ಇಲ್ಲಿ ಮೆಸರ್ಸ್ ಕ್ಯಾಡ್‌ಬರಿ (ಇಂಡಿಯಾ) ಪ್ರೈವೇಟ್ (ಲಿ) ಹಾಗೂ ಮೆಸರ್ಸ್ ಅಮೂಲ್ ಪ್ರಾಡಕ್ಟ್ಸ್‌ನವರು ಬೀಜಗಳನ್ನು ಸಂಗ್ರಹ ಮಾಡುತ್ತಿದ್ದಾರೆಂಬುದಾಗಿ ಹೇಳಿದ್ದೀರಿ. ಅಂದರೆ ಅವರು ಯಾವ ಆಧಾರದ ಮೇಲೆ ಸಂಗ್ರಹ ಮಾಡುತ್ತಿದ್ದಾರೆ ಮತ್ತು ಅದರಿಂದ ಸರ್ಕಾರಕ್ಕೆ ಏನಾದರೂ ಆದಾಯ ಬರುತ್ತಿದೆಯೇ ಹೇಗೆ

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಇವರುಗಳು ೫೦-೫೦ ಪ್ರಮಾಣದಲ್ಲಿ ಬೀಜಗಳನ್ನು ಕೊಂಡು ಕೊಳ್ಳುತ್ತಾರೆ. ಮುಖ್ಯವಾಗಿ ಇವರು ಮಲೇಷ್ಯಾದಿಂದ ಪುಕಸಟ್ಟೆಯಾಗಿ ನಮಗೆ ನರ್ಸರಿಗಳನ್ನು ತರಿಸಿಕೊಟ್ಟು ಅನುಕೂಲ ಮಾಡಿಕೊಟ್ಟಿದ್ದಾರೆ.

Coffee plantation by forest department in Mudigere Taluk.

29. SRI G. PUTTASWAMY (Mudigere).— Will the Minister of State for Forests be pleased to state .—

(a) the total extent of area cultivated and brought under Coffee Plantation by the Forest Department in Nudurai Mane Estate in Mudigere Taluk and since how long it is being cultivated ;

(b) the revenue derived and expenditure incurred after 5 years of planatation and yielding shape (yearwise figures may be furnished) ;

(c) whether any loss and amount of loss incurred ?

SRI H. C. SRIKANTAIAH (Minister of State for Forests).—

(*a*) 25 acres from the year 1971-72 (5 acres during 1971-72, 20 acres during 1972-73).

(*b*)—

Area	Extension of Plantation	Year	Initial expenditure Rs.	Maintenance expenditure Rs.	Revenue Rs.
Mudremane S.F.	5 acres plantation	1971-72	11459.00	...	...
		1972-73		3642.90	...
		1973-74		3645.00	...
		1974-75		4840.00	...
		1975-76		2565.00	900.00
	Total		11459.00	14692.90	900 00
do	20 acres plantation	1972-73	39618.00		
		1973-74		14323.00	
		1974-75		7320.00	
		1975-76		5600.00	
			39618.00	27243.00	

(*c*) Does not arise as the plants are very young and revenue could be expectd to be realised only after 5 years from date of planting.

ಶ್ರೀ ಜಿ. ಪುಟ್ಟಸ್ವಾಮಿ.—ಹತ್ತು ವರ್ಷಗಳ ಹಿಂದೆ ಮೂಡಿಗೆರೆಗೆ ೩ ಮೈಲಿಗಳ ದೂರದಲ್ಲಿ ಈ ಕಾಫೀ ತೋಟಗಾರಿಕೆಯನ್ನು ಪ್ರಾರಂಭ ಮಾಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇಲ್ಲಿ ಇದನ್ನು ಪ್ರಾರಂಭ ಮಾಡಿ ೫-೬ ವರ್ಷಗಳಾಯಿತು ಎಂದಾಗಿ ಉತ್ತರ ಹೇಳಲಾಗಿದೆ. ಇದನ್ನು ಮತ್ತೊಮ್ಮೆ ವೆರಿಫೈ ಮಾಡಿ ನೋಡುತ್ತೀರಾ ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ— ಈಗಾಗಲೇ ಇದನ್ನು ಕೂಲಂಕಷವಾಗಿ ನೋಡಿಯೇ ಇಲ್ಲಿ ಉತ್ತರ ಕೊಡಲಾಗಿದೆ. ಮೊದಲು ೫ ಎಕರೆಗಳಲ್ಲಿ ನಂತರ ೨೦ ಎಕರೆಗಳಲ್ಲಿ ಕಾಫೀ ಪ್ಲಾನ್‌ಟೇಷನನ್ನು ನಮ್ಮ ಇಲಾಖೆಯವರು ಪ್ರಾರಂಭ ಮಾಡಿದರು. ಸಿಲೋನ್‌ನಿಂದ ಬಂದಂಥವರಿಗೆ ಪುನರ್‌ವಸತಿ ಕಲ್ಪಿಸಿ ಕೊಡುವುದಕ್ಕಾಗಿ ಈ ಜಾಗವನ್ನು ತೆಗೆದುಕೊಂಡಿದ್ದು. ಅಲ್ಲಿ ಪ್ರಮುಖವಾಗಿ ರಬ್ಬರ್ ಪ್ಲಾನ್‌ಟೇಷನ್ ಮತ್ತು ಕಾಫೀಪ್ಲಾನ್‌ಟೇಷನ್‌ನ್ನು ಪ್ರಾರಂಭ ಮಾಡುವ ಸಲುವಾಗಿ ಮತ್ತು ಇದಕ್ಕೆ ಕೇಂದ್ರದಿಂದ ಹಣ ಬರುತ್ತದೆ ಎಂಬ ಉದ್ದೇಶದಿಂದ ಇದನ್ನು ಪ್ರಾರಂಭ ಮಾಡಿದ್ದೇವೆ.

ಶ್ರೀ ಜಿ. ಪುಟ್ಟಸ್ವಾಮಿ —ಅರಣ್ಯ ಇಲಾಖೆಯವರು ಮಾಡಿರುವ ತೋಟದ ಪಕ್ಕದಲ್ಲಿಯೇ ಖಾಸಗಿಯವರು ಮಾಡಿರುವ ತೋಟವೂ ಇದೆ. ಆ ಖಾಸಗಿಯವರು ಬೆಳೆದಿರುವ ಗಿಡಗಳು ಸೊಗಸಾಗಿವೆ ಮತ್ತು ಅವರಿಗೆ ಶೇಕಡಾ ನೂರರಿಂದ ಇನ್ನೂರರವರೆಗೆ ಲಾಭ ಬರುತ್ತಿದೆ. ಆದರೆ ಅರಣ್ಯ ಇಲಾಖೆಯವರು ಬೆಳೆಸಿರುವ ಕಡೆಗಳಲ್ಲಿ ನಷ್ಟವಾಗುವುದಕ್ಕೆ ಕಾರಣವೇನು ? ಕಾಫೀ ತೋಟದಲ್ಲಿ ಅನುಭವವಿಲ್ಲದವರು ಅದನ್ನು ನೋಡಿಕೊಳ್ಳುತ್ತಿರುವುದರಿಂದ ಲಂಕ್ಷಾನಾಗುತ್ತಿದೆಯೇ ಹೇಗೆ ? ೧೦ ವರ್ಷಗಳ ಹಿಂದೆ ಶ್ರೀ ಎ. ಕೆ.

ಲಿಂಗಪ್ಪ ಗೌಡರಿಂದ ಈ ಜಾಗವನ್ನು ಪಡೆದುಕೊಂಡ ಮೇಲೆ ಆವರಿಗೆ ಬೇರೆ ಕಡೆ ಜಮೀನನ್ನು ಇನ್ನೂ ಕೊಟ್ಟಿಲ್ಲ ಮತ್ತು ಇಲಾಖೆಯವರು ಸಹ ಸರಿಯಾಗಿ ಕಾಫೀ ತೋಟವನ್ನು ನೋಡಿಕೊಳ್ಳುತ್ತಿಲ್ಲ; ಈ ರೀತಿ ಅಶ್ರದ್ಧೆಯಿಂದ ನೋಡಿಕೊಳ್ಳುತ್ತಿರುವವರ ವಿರುದ್ಧ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಎಚ್. ಪಿ. ಶ್ರೀ ಕಂಠಯ್ಯ.—ಇದನ್ನು ಪೂರ್ಣವಾಗಿ ಪರಿಶೀಲನೆ ಮಾಡುತ್ತೇನೆ.

SRI H. M. CHANNABASAPPA.—The Chief Minister is expected So, Question No, 90 may be taken up afterwards.

MADAM SPEAKER.—Let the Chief Minister come. Let Sri Sayanak put his question.

Twelve Point Prohibition Programme

93. SRI B. B. SAYANAK (Belgaum) — Will the Minister for University Education and Excise be pleased to state:—

(*a*) whether Central Government has issued directions to the State Government to implement 12.Point Prohibition Programme in the State ;

(*b*) if so, what action has been taken by the Government in this respeect ;

(*c*) whether it is a fact that the Government has granted licence to liquor shop; this year upto June 1977 only ;

(*d*) whether it is a fact that Government intend to stop production of liquor in the Sugar Factories ?

SRI S. M. YAHYA (Minister for University Education and Excise).

(*a*) Yes.

(*b*) Many of the points indicated in the programme have already been implemented by the State Government

The Government has already prohibited the advertisements and public inducement for drinking: The Government has also banned opening of liquor shops near industrial organisations and developmental projects. The Government has issued general circular to the effect that there shall be no liquor shops along the highways and residential areas in towns and villages. Since there was no uniform pay days in the State for various establishments, the suggestion for declaring pay dry as dry day is under examination of the Government. Motor Vehicle Act prohibits people who drive vehicles from consuming liquor Government Servants Conduct Rules prohibit drunkeness while on duty and also at public places.

(*c*) Yes.

(*d*) No.